ಕವಿತೆ



## ವಸಂತಕುಮಾರ ಪೆರ್ಲ

ಕಲೆ: ಎಸ್.ವಿ. ಹೂಗಾರ್



# ಯುದ್ಧ ಮತ್ತು ಶಾಂತಿ

ಯುದ್ಧಕಾಲದಲ್ಲಿ ಮತ್ತು ಶಾಂತಿಕಾಲದಲ್ಲಿ
ಉಪಯೋಗಿಸುವ ಶಸ್ತ್ರಾಸ್ತ್ರಗಳು
ಬೇರೆ ಬೇರೆ
ಎರಡೂ ಬೇಕು ಆಯಾಯ ಕಾಲಕ್ಕೆ.

ಒಂದೆಡೆ ದಂಡ ಪ್ರಯೋಗ
ರಾಕೆಟ್ಟು ಮಿಸೈಲು ಕ್ಷಿಪಣಿ
ಇನ್ನೊಂದೆಡೆ
ಭಗವದ್ಗೀತೆ ಉಪನಿಷತ್ತು
ಕುರಾನು ಬೈಬಲ್ಲು
ತೀಕ್ಷ್ಣವಾಗಿದ್ದರೆ ಮಾತ್ರ ನಾಟುವುದು
ದೇಹಕ್ಕೆ
ಮತ್ತು ಮನಸ್ಸಿಗೆ.

ಇರುತ್ತಾರೆ ಮೂರೇ ಜನ್ಮ ಸಾಕೆನುವ
ಚಂಡಮುಂಡರು
ಮತ್ತು ಏಳು ಜನ್ಮವಾದರೂ ಪರವಾಗಿಲ್ಲ
ಅನ್ನುವ ಸನಕ ಸನಂದಾದಿಗಳು
ಎರಡೂ ಇರುತ್ತದೆ ಸೃಷ್ಟಿಯಲ್ಲಿ
ಹಾಗೆಂದು ವಿಷ್ಣು ಎರಡಕ್ಕೂ ಅಸ್ತು.
ನಗುವಾಗ ಸ್ನೇಹಹಸ್ತ
ಕೋಪಗೊಂಡರೆ ಶಾಪಚಿತ್ತ

ನಗು ಅಥವಾ ಕೋಪ
ಯಾವುದು ನಿಮ್ಮ ಆಯ್ಕೆ
ಅನ್ನುವುದರಲ್ಲಿ ನಿರ್ಧಾರವಾಗುವುದು
ಶಾಂತಿ ಅಥವಾ ಯುದ್ಧ.